ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2018–19** **ದಿನಾಂಕ: 11–01–2019**

# ಪತ್ರಿಕಾ ಆಮಂತ್ರಣ

1. Farewell Address to Hon'ble Shri H.G. Ramesh, Judge, High Court of Karnataka due for retirement on 15th January, 2019.

   Date: 14-01-2019 Monday, Time: 2-00 PM.

   Venue: Court Hall No 1 of the Principal Bench of the High Court of Karnataka.

2. Launch of Road Safety Run
   Organised by KSHIP in Association with various Government department
   launch:

   H. D. Kumaraswamy,
   Chief Minister, Government of Karnataka

   Venue: Start and End Points are Kanteerava Stadium, Bengaluru
   Date: 13-01-2019 Sunday Time: Between 6.00 AM to 9-30 AM

ಸಂಖ್ಯೆ: 45/45

## ಪತ್ರಿಕಾ ಪ್ರಕಟಣೆ

## ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸೋಣ –ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ

ಬೆಂಗಳೂರು, ಜನವರಿ 11 (ಕರ್ನಾಟಕ ವಾರ್ತೆ)

ದೇಶದ ಮಾಜಿ ಪ್ರಧಾನಮಂತ್ರಿ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ಪ್ರತಿಯೊಬ್ಬ ರಾಜಕಾರಣಿಗಳಿಗೂ ಮಾರ್ಗದರ್ಶಕರು. ಅವರ ಆದರ್ಶಗಳನ್ನು ನಾವೆಲ್ಲರೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಮುನ್ನಡೆಯೋಣ ಎಂದು ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ತಿಳಿಸಿದರು.

ವಿಧಾನ ಸೌಧದ ಆವರಣದಲ್ಲಿ ಇಂದು ದಿವಂಗತ ಮಾಜಿ ಪ್ರಧಾನಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ 53 ನೇ ಪುಣ್ಯ ತಿಥಿ ಅಂಗವಾಗಿ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಮುಖ್ಯಮಂತ್ರಿಗಳು, ದೇಶ ಕಾಯುವ ಸೈನಿಕರಿಗೆ ಜೈ ಜವಾನ್, ದೇಶಕ್ಕೆ ಅನ್ನ ನೀಡುವ ರೈತನಿಗೆ ಜೈ ಕಿಸಾನ್ ಎಂಬ ಮಂತ್ರಘೋಷ ಮಾಡಿದವರು ಲಾಲ್‌ಬಹದ್ದೂರ್ ಶಾಸ್ತ್ರಿ . ಅವರು ಇಂದಿಗೂ ಎಂದಿಗೂ ದೇಶದ ಎಲ್ಲಾ ಜನರ ಮನದಾಳದಲ್ಲಿದ್ದಾರೆ ಎಂದರು.

ಮಲೆನಾಡು ಭಾಗದಲ್ಲಿ ಮಂಗನ ಕಾಯಿಲೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು ಅಧಿಕಾರಿಗಳು ಖಾಯಿಲೆ ತಡೆಗಟ್ಟುವಲ್ಲಿ ಈಗಾಗಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಮಾತನಾಡಿದ ಮುಖ್ಯಮಂತ್ರಿ ಅವರು ಖಾಯಿಲೆಗೆ ತುತ್ತಾದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದ್ದು ರೋಗಿಗಳು ಆತಂಕ ಪಡದಂತೆ ಮನವಿ ಮಾಡಿದರು.

ವಿಕಾಸ ಸೌಧ ಆವರಣದಲ್ಲಿ ಇತ್ತೀಚೆಗೆ ದೊರೆತ ಹಣಕ್ಕೆ ಸಂಬಂಧಿಸಿದಂತೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಈ ವಿಚಾರಕ್ಕೆ ಸಂಬಂಧಿಸಿದಂತೆ ಕಾನೂನುಬದ್ದ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್, ಸಂಸದೀಯ ಕಾರ್ಯದರ್ಶಿ ಐವಾನ್ ಡಿಸೋಜ ಸೇರಿದಂತೆ ಸಚಿವಾಲಯದ ಹಿರಿಯ ಅಧಿಕಾರಿಗಳು ಸಿಬ್ಬಂದಿಗಳು ದಿ. ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಸಂಖ್ಯೆ: 46/46

## ಯಾತ್ರಿಗಳಿಗೆ ಲಾಟರಿ ಮೂಲಕ ಸಹಾಯಧನಕ್ಕೆ ಆಯ್ಕೆ

ಬೆಂಗಳೂರ, ಜನವರಿ 11 (ಕರ್ನಾಟಕ ವಾರ್ತೆ)

2018–19ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ ಮತ್ತು ಚಾರ್‌ಧಾಮ್ ಯಾತ್ರೆ ಪೂರೈಸಿ ಸಹಾಯ ಧನವನ್ನು ಕೋರಿ ಆನ್‌ಲೈನ್ ಮತ್ತು ಮುದ್ದಾಂ ಆಗಿ ಅರ್ಜಿ ಸಲ್ಲಿಕೆಯಾಗಿದ್ದು ಸರ್ಕಾರದ ಅನುದಾನದ ಲಭ್ಯತೆಗಿಂತಲೂ ಹೆಚ್ಚಾಗಿ ಅರ್ಜಿಗಳು ಸ್ವೀಕೃತಗೊಂಡಿರುವುದರಿಂದ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಚಾರ್‌ಧಾಮ್ ಯಾತ್ರೆಗೆ 1730 ಫಲಾನುಭವಿಗಳನ್ನು , ಮಾನಸ ಸರೋವರ ಯಾತ್ರೆಗೆ 1000 ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆಮಾಡಲು ಹಿರಿಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಜನವರಿ 16 ಮತ್ತು 17 ರಂದು ಬೆಳಿಗ್ಗೆ 9–30 ಗಂಟೆಗೆ ಬೆಂಗಳೂರು ಚಾಮರಾಜಪೇಟೆಯಲ್ಲಿರುವ ರಾಯ ರಾಯ ಛತ್ರದ ಆವರಣದಲ್ಲಿ ಪಾರದರ್ಶಕವಾಗಿ ವಿಡಿಯೋ ಚಿತ್ರೀಕರಣದೊಂದಿಗೆ ಲಾಟರಿ ಪ್ರಕ್ರಿಯೆ ನಡೆಸಲಿದೆ.

ಸಹಾಯ ಧನ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವ ಇಚ್ಛೆವುಳ್ಳ ಯಾತ್ರಾರ್ಥಿಗಳು ಬಹಿರಂಗವಾಗಿ ನಡೆಸಲಿರುವ ಲಾಟರಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಧಾರ್ಮಿಕ ದತ್ತಿ ಇಲಾಖೆಯ ಆಯಕ್ತರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 47/47**

## Science Club discussion on ‘Astronomy Basics’

Bengaluru, Dec 11 (Karnataka Information)

JAWAHARLAL NEHRU PLANETARIUM Bangalore Association for Science Education Science Club discussion on ‘Astronomy Basics’.

Ever since humans walked on the face of the Earth, they were intrigued by the mysteries of Universe. By carefully observing the alluring night sky myths and anecdotes were associated to group of stars, patterns were deduced in the motion of planets which revealed our own position in the solar system, eclipses were understood as phenomena due to interplay in positions of celestial bodies, etc. In this session above mentioned aspects shall be discussed along with new developments of the field in an introductory way. Science Club is held every second Sunday of the month. It is mainly targeted at the students studying in classes VIII-XII in order to evoke curiosity and develop scientific temper among them. Interested PUBLIC can also attend the session as it will be at basic level. Eligibility: Students of Classes VIII to XII; Interested Public Date: 13th January 2019 Venue : Jawaharlal Nehru Planetarium Sri. T Chowdaiah Road High Grounds Bengaluru – 560 001 Time: 3:00 PM to 4:30 PM No. of participants : 50 Entry is Free! Interested participants must register over phone or by email – info@taralaya.org. A maximum of 50 participants can be accommodated on a first-come-first-served basis. Further details may be obtained from Jawaharlal Nehru Planetarium on 2237 9725 / 2220 3234 Or visit our website: http://www.taralaya.org/announcements.php says an official press release.

**ಸಂಖ್ಯೆ: 48/48**

## ಸುಗ್ಗಿ–ಹುಗ್ಗಿ 2019 ಕಾರ್ಯಕ್ರಮ

ಬೆಂಗಳೂರ, ಜನವರಿ 11 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಜನವರಿ 15 ರಂದು

ಬೆಳಿಗ್ಗೆ 11–00 ಗಂಟೆಗೆ ಸಿರಿಧಾನ್ಯಗಳೊಂದಿಗೆ ಸಂಕ್ರಾಂತಿ ಪರಿಕಲ್ಪನೆಯಡಿ ಸುಗ್ಗಿ–ಹುಗ್ಗಿ ಕಾರ್ಯಕ್ರಮವನ್ನು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಜಯಮಾಲ ರಾಮಚಂದ್ರ ಅವರು ಉದ್ಘಾಟಿಸಲಿದ್ದಾರೆ. ರಾಶಿ ಪೂಜೆಯನ್ನು ಉಪಮುಖ್ಯಮಂತ್ರಿ ಜಿ. ಪರಮೇಶ್ವರ ಅವರು ನೆರವೇರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಕೃಷಿ ಸಚಿವ ಎನ್. ಶಿವಶಂಕರ ರೆಡ್ಡಿ, ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವ ಕೃಷ್ಣ ಬೈರೇಗೌಡ, ತೋಟಗಾರಿಕೆ ಸಚಿವ ಎಂ.ಸಿ. ಮನಗುಳಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಬಿ. ಉದಯ್ ಗರುಡಾಚಾರ್ ಅವರು ವಹಿಸಲಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಅಂದು ಜಾನಪದ ಕಲಾ ತಂಡಗಳ ಪ್ರದರ್ಶನ ಹಾಗೂ ಸುಗ್ಗಿ ಹಾಡುಗಳ ಗಾಯನ, ಸಿರಿಧಾನ್ಯಗಳ ಆಹಾರ ಮಳಿಗೆಗಳು, ಕಾರ್ಯಕ್ರಮದ ಪ್ರಮುಖ ಆಕರ್ಷಣೆಗಳಾಗಿವೆ. ಈ ಕಾರ್ಯಕ್ರಮಕ್ಕೆ ತೋಟಗಾರಿಕೆ ಇಲಾಖೆ, ಸಣ್ಣ ಮತ್ತು ಗುಡಿಕೈಗಾರಿಕೆ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ಇವರು ಸಹಕಾರ ನೀಡುತ್ತಿದ್ದಾರೆ.

**ಸಂಖ್ಯೆ: 49/49**

## ಲಾಲ್‌ಬಾಗ್‌ನಲ್ಲಿ ಪುಷ್ಪ ಪ್ರದರ್ಶನ

ಬೆಂಗಳೂರ, ಜನವರಿ 11 (ಕರ್ನಾಟಕ ವಾರ್ತೆ)

ಮೈಸೂರು ತೋಟಗಾರಿಕಾ ಸಂಘದ ವತಿಯಿಂದ ಗಣರಾಜ್ಯೋತ್ಸವ ಅಂಗವಾಗಿ ಜನವರಿ 18 ರಿಂದ 27 ರವರೆಗೆ ಡಾ. ಎಂ. ಎಚ್. ಮರೀಗೌಡ ರಸ್ತೆಯಲ್ಲಿರುವ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪುಷ್ಪ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 50/50**

## ಜನವರಿ 15 ರಂದು
## ‘ಶಿವಯೋಗಿ ಶ್ರೀ ಸಿದ್ದರಾಮೇಶ್ವರ ಜಯಂತಿ’

ಬೆಂಗಳೂರ, ಜನವರಿ 11 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜನವರಿ 15 ರಂದು ಸಂಜೆ 6–00 ಗಂಟೆಗೆ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ “ಶಿವಯೋಗಿ ಶ್ರೀ ಸಿದ್ಧರಾಮೇಶ್ವರ” ಜಯಂತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ನೆರವೇರಿಸಲಿದ್ದಾರೆ.

ಜಾನಪದ ಕಲಾತಂಡಗಳ ಮತ್ತು ಶಿವಯೋಗಿ ಶ್ರೀ ಸಿದ್ದರಾಮೇಶ್ವರ ಭಾವಚಿತ್ರದೊಂದಿಗೆ ಅಂದು ಸಂಜೆ 5–00 ಗಂಟೆಗೆ ಟೌನ್‌ಹಾಲ್‌ನಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಮೆರವಣಿಗೆ ಸಹ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 51/51**

## “ROAD SAFETY RUN”

Bengaluru, Dec 11 (Karnataka Information)

The **Karnataka State Highways Improvement Project (KSHIP)** is an initiative of the Public Works Department of the Government of Karnataka for improvement of road network of the state with World Bank assistance. The World Bank opined that the Road Safety should be given major importance for the economic growth of the state. In this regard, as a Pilot Project, Safe Corridor Demonstration Programme (SCDP) for enhancing road safety from Yaragatti to Belgaum (SH-20) for a length of about 60 Kms on Engineering interventions recommended by International Road Assessment Programme (iRAP) was undertaken by the KSHIP.

A multi-sector intervention was planned in the corridor involving Engineering, Transport, Police, Health & Education department. As part of this, the Engineering corrections in the corridor were completed & enhanced enforcement by the police was made in the corridor, as a

result of which about 34% of accidents & 59% of fatalities have come down over a period of one year. In continuation of the multi-sectoral intervention and as a last leg of this activity, a Road Safety Awareness Program was to be carried out in SCDP Corridor to create awareness & sensitize the public about safety.

The Road Safety Awareness Programme was launched in Belgaum by the Hon'ble Chief Minister of Karnataka. The KSHIP received huge appreciation from the Hon'ble Chief Minister of Karnataka and other public representatives for pioneering such a noble programme.

Bangalore city has high traffic density and also maximum types of traffic offenses are being noticed due to unsafe driving behaviour of road users. Hence, KSHIP has planned to create awareness on road safety in Bangalore by organizing a "**ROAD SAFETY RUN**" in association with Police, Transport, Health, Education departments (Stake holding departments in Road Safety Authority) & also with Department Youth Empowerment & Sport.

The **RUN** will be launched by Hon'ble Chief Minister of Karnataka on 13the Jan 2019. The RUN will be for a length of 2 Kms, 5Kms & 10 Kms. The event will be between 6.00 AM to 9.30 AM, the start & end Points are in Kanteerava Stadium. The Government officers of all the above departments and General Public will be participating in this event.

We request your kind self to inform & mobilizing the local & national press fraternity in Bangalore to cover launch of this programme and publish this extensively in their respective publications and TV channels so that the road safety message will spread all over the State. We look forward to your kind support says official press release.